ದಿನಾಂಕ : 04.09.2023
ಅಸಲು ದಾವೆ: 37/2015 ರಿಂದ 40/2015
ಡಿ.ಡಬ್ಲ್ಯೂ: 1

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು : ವಾದಿ ಪರ ವಕೀಲರಾದ ಶ್ರೀ ಹೆಚ್.ಎಂ. ರವರಿಂದ :**

ನಾನು ಬೆಂಗಳೂರಿನಲ್ಲಿ 30 ವರ್ಷದಿಂದ ವಾಸವಾಗಿರುತ್ತೇನೆ ಎಂದರೆ ಸರಿ. ನಾನು ವ್ಯವಹಾರ ಮಾಡುತ್ತೇನೆ. ಕಟ್ಟಡ ಕಟ್ಟಿ ಮಾರಾಟ ಮಾಡುತ್ತಿದ್ದು, ಅದನ್ನು 20 ವರ್ಷದಿಂದ ಮಾಡುತ್ತಿದ್ದೇನೆ. 1995 ರಿಂದ ಆದಾಯ ತೆರಿಗೆಯನ್ನು ಪಾವತಿ ಮಾಡುತ್ತಿದ್ದೇನೆ. ಜಮೀನನ್ನು ಖರೀದಿ ಮಾಡಿದ ಬಗ್ಗೆ ನನ್ನ income tax returns ನಲ್ಲಿ ತೋರಿರುತ್ತೇನೆ. ಪೂರ್ವಕ್ಕೆ - ನದಿ, ಪಶ್ಚಿಮಕ್ಕೆ - ನರಸಿಂಹ ಮತ್ತು ಗಿರಿತಿಮ್ಮ ವಗೈರೆಯವರ ಜಮೀನು, ದಕ್ಷಿಣಕ್ಕೆ - ಗಿರಿಯಪ್ಪನ ತಿಮ್ಮನ ಹೊಲ , ಉತ್ತರಕ್ಕೆ - ಕಿರಂಗೂರು ಎಲ್ಲೆ ಮತ್ತು ಜವರನ ಜಮೀನು , ಈ ಚೆಕ್ಕುಬಂದಿ ಒಳಗಿರುವ ಜಮೀನನ್ನು ನಾನು ನೋಡಿರುತ್ತೇನಾ ಎಂದರೆ ಸಾಕ್ಷಿಯು ನಾನು ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಅದೇ ಜಮೀನಿಗೆ ಈ ದಾವೆ ನಡೆಯುತ್ತಿದೆ ಎಂದರೆ ಸರಿ.

ಪೂರ್ವಕ್ಕೆ - ದೊಡ್ಡ ಹೊಳೆ, ದಕ್ಷಿಣಕ್ಕೆ - ತಿಮ್ಮಯ್ಯ ವಗೈರೆಯವರ ಜಮೀನು ಮತ್ತು ಹಳ್ಳ ಕೊರಕಲು, ಪಶ್ಚಿಮಕ್ಕೆ - ನರಸಿಂಹನ ಜಮೀನು , ಉತ್ತರಕ್ಕೆ - ಕಿರಂಗೂರು ಎಲ್ಲೆ , ಈ ಜಮೀನು ಮೇಲೆ ಹೇಳಿರುವ ಚೆಕ್ಕುಬಂದಿ ಇದು ಕೂಡ ಅದೇ ಚೆಕ್ಕು ಬಂದಿ ಎಂದರೆ ಸಾಕ್ಷಿಯು ತಪ್ಪು ಎಂದು ನುಡಿಯುತ್ತಾರೆ. ಮೇಲೆ ಹೇಳಿದ ಚೆಕ್ಕುಬಂದಿಯ ಪೂರ್ವಕ್ಕೆ ನದಿ ಎಂದು ಹೇಳಿದ್ದು ಅದು ಯಾವ ನದಿ ಎಂದರೆ ಶಿಂಷಾ ನದಿ. ದೊಡ್ಡ ಹೊಳೆ ಅಂದರೆ ಶಿಂಷಾ ನದಿ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಕ್ಷಿಣಕ್ಕೆ ಇರುವ ಚೆಕ್ಕುಬಂದಿ ಮೇಲೆ 2 ಚೆಕ್ಕುಬಂದಿಯಲ್ಲಿ ಒಂದೇ ಇರುತ್ತದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಎರಡು ಚೆಕ್ಕುಬಂದಿಯಲ್ಲಿ ಉತ್ತರಕ್ಕೆ ಕಿರಂಗೂರು ಎಲ್ಲೆ ಎಂದರೆ ಸರಿ. ಮೊದಲು ಹೇಳಿದ ಚೆಕ್ಕುಬಂದಿಯಲ್ಲಿ ನರಸಿಂಹನ ಜಮೀನು ಎಂದು ಹೇಳಿದ್ದು, 2 ನೇ

ಚೆಕ್ಕುಬಂದಿಯಲ್ಲೂ ನರಸಿಂಹನ ಜಮೀನು ಎಂದರೆ ಸಾಕ್ಷಿಯು ನರಸಿಂಹ ಯಾರು ಗೊತ್ತಿಲ್ಲ ಅದು ತಪ್ಪು ಎಂದು ನುಡಿಯುತ್ತಾರೆ.

ನನ್ನ ಕ್ರಯಪತ್ರದ ಚೆಕ್ಕುಬಂದಿಯ ಪೂರ್ವಕ್ಕೆ ಶಿಂಷಾ ನದಿ, ಪಶ್ಚಿಮಕ್ಕೆ ಯಾರ ಸ್ವಾಧೀನದಲ್ಲಿ ಇರುವ ಜಮೀನು ಎಂದರೆ ಸಾಕ್ಷಿಯು ಸರ್ವೆ ನಂ.6 ಎಂದು ಮಾತ್ರ ಬರೆಸಿರುತ್ತೇನೆ. ಉತ್ತರಕ್ಕೆ ಕೆಂಪೇಗೌಡ ಮತ್ತು ಅಂಕ ಅವರ ಜಮೀನು ಅದು ಹಳೇ ಹಳ್ಳಿ ವ್ಯಾಪ್ತಿಗೆ ಬರುತ್ತದೆ. ದಕ್ಷಿಣಕ್ಕೆ ಕಾರೇಗುಡ್ಡ ಮತ್ತು ಮಾಯಣ್ಣ ಅವರ ಜಮೀನು. ಅದು ಸರ್ವೆ ನಂ.8 ರಲ್ಲಿ ಬರುತ್ತದೆ.

ಉತ್ತರಕ್ಕೆ ಇರುವ ಕೆಂಪೇಗೌಡ ಮತ್ತು ಅಂಕ ಅವರ ಜಮೀನು ಎಷ್ಟು ವಿಸ್ತೀರ್ಣ ಎಂದರೆ, ಕೆಂಪೇಗೌಡ ಅವರದು 2 ಎಕರೆ 7 ಗುಂಟೆ ವಿಸ್ತೀರ್ಣ ಮತ್ತು ಅಂಕ ಅವರದು 2 ಎಕರೆ 30 ಗುಂಟೆ. ಕೆಂಪೇಗೌಡ ಮತ್ತು ಅಂಕ ಅವರ ಉತ್ತರಕ್ಕೆ ಏನು ಬರುತ್ತದೆ ಎಂದರೆ ಸಾಕ್ಷಿಯು ಕಿರಂಗೂರು ಎಲ್ಲೆ ಜಮೀನು ಎಂದು ನುಡಿಯುತ್ತಾರೆ. ಪಶ್ಚಿಮಕ್ಕೆ ಸರ್ವೆ ನಂ.6 ಎಂದು ಹೇಳಿದ್ದು, ಅದು ಎಷ್ಟು ಎಕರೆ ಇದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.6 ರಲ್ಲಿ ಎಷ್ಟು ಜನ ವ್ಯವಸಾಯ ಮಾಡುತ್ತಾರೆ ಎಂದರೆ ಸಾಕ್ಷಿಯು ಕರಿಗೌಡ ಮತ್ತು ಅವರ ಮಕ್ಕಳು ವ್ಯವಸಾಯ ಮಾಡುತ್ತಾರೆ ಎಂದು ನುಡಿಯುತ್ತಾರೆ.

ಈ ದಾವೆಯಲ್ಲಿ ದಾವಾ ಆಸ್ತಿಯ ಚೆಕ್ಕುಬಂದಿ ಪೂರ್ವಕ್ಕೆ - ದೊಡ್ಡಹೊಳೆ (ಶಿಂಷಾ ನದಿ), ಪಶ್ಚಿಮಕ್ಕೆ - ಸರ್ವೆ ನಂ.6 ರಲ್ಲಿ ನರಸಿಂಹರವರ ಜಮೀನು ಈಗ ಹಾಲಿ ಚಿಕ್ಕಣ್ಣ ಅವರ ಜಮೀನು, ಉತ್ತರಕ್ಕೆ - ಕಿರಂಗೂರು ಎಲ್ಲೆಯಲ್ಲಿ ಇರುವ ರಾಜು ಮತ್ತು ಇತರರ ಜಮೀನು, ದಕ್ಷಿಣಕ್ಕೆ - ತಿಮ್ಮಯ್ಯ ಮತ್ತು ಇತರರು ಮತ್ತು ಹಳ್ಳ ಕೊರಕಲು ಈ ಮಧ್ಯೆ ಇರುವ 20 ಎಕರೆ 24 ಗುಂಟೆ ಜಮೀನು ಬರುತ್ತದೆ ಎಂದರೆ ಸಾಕ್ಷಿಯು ಚೆಕ್ಕು ಬಂದಿ ತಪ್ಪು ಎಂದು ನುಡಿಯುತ್ತಾರೆ. ಸಾಕ್ಷಿಯು ಸ್ವತಃ ಅದರ ವಿಸ್ತೀರ್ಣ 26 ಎಕರೆ 1 ಗುಂಟೆ ಎಂದು ನುಡಿಯುತ್ತಾರೆ. ನಾನು ಖರೀದಿ ಮಾಡಿದ ಜಮೀನನ್ನು ಅಳತೆ ಮಾಡಿಸಿರುತ್ತೇನಾ ಎಂದರೆ ಸಾಕ್ಷಿಯು ಅಳತೆ ಮಾಡಿಸಿ ಪೋಡು ಆಗಿರುತ್ತದೆ. ಯಾವಾಗ ಅಳತೆಯಾಗಿರುತ್ತದೆ ಎಂದರೆ 2013 ರಲ್ಲಿ ಅಳತೆಯಾಗಿರುತ್ತದೆ. ಅಳತೆ ಮಾಡಿದ ಬಗ್ಗೆ ದಾಖಲೆ ಹಾಜರು ಮಾಡಿರುತ್ತೇನಾ ಎಂದರೆ ಹಾಜರು ಮಾಡಿರುತ್ತೇನೆ. ನಾನು ಖರೀದಿ ಮಾಡಿದ ಜಮೀನು ಸರ್ವೆ ನಂ.7/2 ಆಗಿರುತ್ತದೆ. ಸರ್ವೇ ನಂ.7/1 ಕೆಂಪೇಗೌಡ ಮತ್ತು ಅಂಕ ಅವರ ಜಮೀನು. ಕೆಂಪೇಗೌಡ ಮತ್ತು ಅಂಕ ಅವರು 1965 ಮತ್ತು 1967 ರಲ್ಲಿ ಖರೀದಿ ಮಾಡಿರುತ್ತಾರೆ. ನಾನು ಖರಿದಿ

ಮಾಡಿದ ಜಮೀನು ಮೇಲೆ  ಹೇಳಿದ ಚಕ್ಕುಬಂದಿಯಲ್ಲಿ ಬರುತ್ತದೆಯಾ ಎಂದರೆ ಸಾಕ್ಷಿಯು ಬರುತ್ತದೆ ಎಂದು ನುಡಿಯುತ್ತಾರೆ .

ಒ.ಎಸ್.37/2015 ರ ದಾವೆಯಲ್ಲಿ ದಾವಾ ಆಸ್ತಿಯ ಚೆಕ್ಕುಬಂದಿ ತಿಳಿದುಕೊಂಡಿರುತ್ತೇನಾ ಎಂದರೆ ತಿಳಿದುಕೊಂಡಿರುವುದಿಲ್ಲ. ಸದರಿ ದಾವೆಯಲ್ಲಿ 5 ಎಕರೆ 27 ಗುಂಟೆಗೆ ದಾವೆ ಹೂಡಿರುತ್ತಾರೆ. ವಾದಿಯ 5 ಎಕರೆ 27 ಗುಂಟೆ ಮೇಲೆ ಹೇಳಿದ ಚೆಕ್ಕುಬಂದಿ ಒಳಗೆ ಬರುತ್ತದೆಯಾ ಎಂದರೆ ಬರುತ್ತದೆ.

1911 ಕ್ಕಿಂತ ಮುಂಚೆ ಸರ್ವೆ ನಂ.6 ರಲ್ಲಿ ಎಷ್ಟು ಜಮೀನು ಇತ್ತು ಎಂದರೆ ನನಗೆ ಗೊತ್ತಿಲ್ಲ. 1911 ರ ನಂತರ ಸರ್ವೆ ನಂ.7 ರಲ್ಲಿ ಎಷ್ಟು ವಿಸ್ತೀರ್ಣ ಬಂತು ಎಂದರೆ ಸಾಕ್ಷಿಯು 19 ಎಕರೆ 9 ಗುಂಟೆ  ಮತ್ತು 1 ಎಕರೆ 33 ಗುಂಟೆ ಖರಾಬು ಒಟ್ಟು 21 ಎಕರೆ 2 ಗುಂಟೆ ಜಮೀನು ಬಂದಿರುತ್ತದೆ ಎಂದು ನುಡಿಯುತ್ತಾರೆ. 21 ಎಕರೆ 2 ಗುಂಟೆಗೆ ಮೇಲೆ ಹೇಳಿದ ಚೆಕ್ಕುಬಂದಿ ಒಳಗಡೆ ಬರುತ್ತದೆಯಾ ಎಂದರೆ ಬರುತ್ತದೆ.

1911 ಕ್ಕಿಂತ ಮುಂಚೆ ಸರ್ವೆ ನಂ.7 ಎಂದು ಜಮೀನು ಇರಲಿಲ್ಲ ಎಂದರೆ ಸಾಕ್ಷಿಯು ನನಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ . 1911 ಕ್ಕಿಂತ ಮುಂಚೆ ಸರ್ವೆ ನಂ.7 ಇದ್ದ ಬಗ್ಗೆ ಯಾವುದೇ ಆಕಾರ್ ಬಂದ್ ಮತ್ತು ಟಿಪ್ಪಣಿ ಇರಲಿಲ್ಲ ಎಂದರೆ ನನಗೆ ಮಾಹಿತಿ ಇರುವುದಿಲ್ಲ.

**ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಸಮಯ ನೀಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮದ್ದೂರು.